

ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಕರ್ನಾಟಕ ಸರ್ಕಾರ



ಶ್ರೀ ಬಸವರಾಜ ಎಸ್ ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ವಿ ಸುನಿಲ್ ಕುಮಾರ್
ಸನ್ಮಾನ್ಯ ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು,
ಕರ್ನಾಟಕ ಸರ್ಕಾರ

ಮಾತಾಡ್ ಮಾತಾಡು ಕನ್ನಡ

## 67ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ

# ಕೋಟಿ ಕಂಠ ಗಾಯನ




ನವೆಂಬರ್ 01, 2022ರಂದು 67ನೇ ಕರ್ನಾಟಕ ರಾಜ್ಯೋತ್ಸವವನ್ನು ನಾಡಿನಾದ್ಯಂತ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಅತ್ಯಂತ ವಿಶಿಷ್ಟವಾಗಿ ಆಚರಿಸಲು ಉದ್ದೇಶಿಸಲಾಗಿದೆ. ಕಳೆದ ವರ್ಷ 66ನೇ ಕರ್ನಾಟಕ ರಾಜ್ಯೋತ್ಸವವನ್ನು ವಿನೂತನವಾಗಿ ಆಚರಿಸಲಾಯಿತು. ನಾಡಿನಾದ್ಯಂತ ನಾಲ್ಕು ಸಾವಿರಕ್ಕೂ ಹೆಚ್ಚು ಸ್ಥಳಗಳಲ್ಲಿ 22 ಲಕ್ಷಕ್ಕೂ ಹೆಚ್ಚು ಜನರು ಒಂದೇ ಸಮಯದಲ್ಲಿ ಏಕಕಂಠದಲ್ಲಿ ನಾಡಗೀತೆ ಸೇರಿದಂತೆ ಆಯ್ದ ಕನ್ನಡ ಗೀತೆಗಳನ್ನು ಹಾಡುವ ಮೂಲಕ ತಮ್ಮ ಕನ್ನಡಾಭಿಮಾನವನ್ನು ಮೆರೆಸಿದರು. **ಮಾತಾಡ್ ಮಾತಾಡು ಕನ್ನಡ** ಎನ್ನುವ ಘೋಷವಾಕ್ಯದೊಂದಿಗೆ ನಡೆದ ಈ 'ಲಕ್ಷ ಕಂಠ ಗಾಯನ'ವು ಒಂದು ಇತಿಹಾಸವನ್ನೇ ಸೃಷ್ಟಿಸಿತು.

ಈ ಬಾರಿಯ 67ನೇ ಕರ್ನಾಟಕ ರಾಜ್ಯೋತ್ಸವವನ್ನು ಇನ್ನೂ ಹೆಚ್ಚಿನ ಸಂಭ್ರಮ, ಉತ್ಸಾಹಗಳಿಂದ ನಾಡಿನಾದ್ಯಂತ ಆಚರಿಸುವ ಹಿನ್ನೆಲೆಯಲ್ಲಿ 'ಕೋಟಿ ಕಂಠ ಗಾಯನ'ವನ್ನು ಆಯೋಜಿಸಲಾಗಿದೆ. ಬೃಹತ್ ವೃಂದಗಳಲ್ಲಿ ಆಯ್ದ ಆರು ಕನ್ನಡ ಗೀತೆಗಳನ್ನು ಒಂದು ಕೋಟಿಗೂ ಹೆಚ್ಚು ಜನ ಏಕಕಂಠದಲ್ಲಿ ಹಾಡುವುದರ ಮೂಲಕ ಐತಿಹಾಸಿಕ ದಾಖಲೆ ಬರೆಯುವುದರ ಮೂಲಕ ಈ ಬಾರಿಯ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸುವ ಸಂಕಲ್ಪ ಮಾಡಲಾಗಿದೆ.

ಕೋಟಿ ಕಂಠ ಗಾಯನದ ಈ ಅಭಿಯಾನದಲ್ಲಿ ಭಾಗವಹಿಸಿ, ಕೋಟಿ ಕಂಠಗಳ ಪಾಂಚಜನ್ಯಕ್ಕೆ ನಿಮ್ಮ ಕಂಠವೂ ಸೇರಲಿ. ಬಿಂದುವೊಂದು ಸಿಂಧುವಾಗುವಂತೆ ನಿಮ್ಮ ಕಂಠವು ಮಿಳಿತಗೊಂಡು ಕೋಟಿ ಕಂಠವಾಗಿ ಹೊರಹೊಮ್ಮಲಿ. ನಾಡಿನಾದ್ಯಂತ ಮೊಳಗುವ ಕೋಟಿ ಕಂಠಗಳ ಮಹಾನ್ ನಾದದಲ್ಲಿ ನಿಮ್ಮ ಧ್ವನಿಯೂ ಸೇರಲಿ. ಬನ್ನಿ ಎಲ್ಲರೂ ಒಟ್ಟಾಗಿ ಕನ್ನಡ ಹಾಡುಗಳನ್ನು ಹಾಡೋಣ, ಕನ್ನಡ ನಾಡನ್ನು ಪ್ರೀತಿಸೋಣ, ಕನ್ನಡ ಸಂಸ್ಕೃತಿಯನ್ನು ಸಂಭ್ರಮಿಸೋಣ, ಕೋಟಿ ಕಂಠ ಗಾಯನದ ಇತಿಹಾಸದ ನಿರ್ಮಾಣದಲ್ಲಿ ನಾವೆಲ್ಲರೂ ಭಾಗಿಗಳಾಗೋಣ.

## ಆಯ್ದ ಕನ್ನಡ ಹಾಡುಗಳು

ನಾಡಗೀತೆಯಾದ 'ಜಯ ಭಾರತ ಜನನಿಯ ತನುಜಾತೆ'
-ರಚನೆ: ಶ್ರೀ ಕುವೆಂಪು

ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು
ರಚನೆ: ಶ್ರೀ ಹುಯಿಲಗೋಳ ನಾರಾಯಣರಾಯರು

'ಬಾರಿಸು ಕನ್ನಡ ಡಿಂಡಿಮವ...'
-ರಚನೆ: ಶ್ರೀ ಕುವೆಂಪು

'ಹಚ್ಚೇವು ಕನ್ನಡದ ದೀಪ...'
-ರಚನೆ: ಶ್ರೀ ಡಾ.ಡಿ.ಎಸ್.ಕರ್ಕಿ

'ವಿಶ್ವವಿನೂತನ ವಿದ್ಯಾಚೇತನ...'
-ರಚನೆ: ಶ್ರೀ ಚನ್ನವೀರ ಕಣವಿ

'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು...'
-ರಚನೆ: ಶ್ರೀ ಹಂಸಲೇಖ



## ಕೋಟಿ ಕಂಠ ಗಾಯನ, ಎಲ್ಲೆಲ್ಲಿ?

ನಾಡಿನೆಲ್ಲೆಡೆ 10 ಸಾವಿರಕ್ಕೂ ಹೆಚ್ಚು ಸ್ಥಳಗಳಲ್ಲಿ, ರಾಜ್ಯದ ಮೂಲೆ ಮೂಲೆಯಲ್ಲಿ, ಗ್ರಾಮ ಗ್ರಾಮಗಳಲ್ಲಿ ಒಂದು ಕೋಟಿಗೂ ಹೆಚ್ಚು ಕಂಠಗಳಲ್ಲಿ ಕನ್ನಡ ಗಾಯನ ಮೊಳಗಲಿದೆ.


ನಾಡಿನ ಎಲ್ಲಾ ಸಂಘ-ಸಂಸ್ಥೆಗಳಲ್ಲಿ * ಶಾಲಾ ಕಾಲೇಜುಗಳಲ್ಲಿ * ವಿಶ್ವ ವಿದ್ಯಾಲಯಗಳಲ್ಲಿ * ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಕೋಟಿ ಕಂಠ ಗಾಯನ

ವಿಧಾನ ಸೌಧದ ಮೆಟ್ಟಿಲುಗಳ ಮೇಲೆ * ಕಂಠೀರವ ಕ್ರೀಡಾಂಗಣದಲ್ಲಿ ಐವತ್ತು ಸಾವಿರ ಜನರ ಸಮೂಹಗಾನ * ಮೆಟ್ರೋಗಳಲ್ಲಿ * ಹಾರುವ ವಿಮಾನದಲ್ಲಿ * ವಿಮಾನ ನಿಲ್ದಾಣಗಳಲ್ಲಿ ಗೀತ ಗಾಯನ. * ಮಾಲ್‌ಗಳಲ್ಲಿ * ಬಸ್/ರೈಲು ನಿಲ್ದಾಣಗಳಲ್ಲಿ * ಹೊರರಾಜ್ಯಗಳಲ್ಲಿ * ಐಟಿ ಬಿಟಿ ಸಂಸ್ಥೆಗಳಲ್ಲಿ * ರಿಕ್ಷಾ ನಿಲ್ದಾಣಗಳಲ್ಲಿ * ಕಾರ್ಖಾನೆಗಳಲ್ಲಿ * ವಸತಿ ಸಮುಚ್ಚಯಗಳಲ್ಲಿ ಗೀತ ಗಾಯನ

ಕರ್ನಾಟಕ ಉಚ್ಚನ್ಯಾಯಾಲಯದ ಆವರಣ * ಕೆಂಪೇಗೌಡ ವಿಮಾನ ನಿಲ್ದಾಣ * ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್ * ಹಲಸೂರುಕೆರೆ * ಬೆಂಗಳೂರು ಮೆಟ್ರೋ * ಬಿಎಂಟಿಸಿ ಬಸ್ ನಿಲ್ದಾಣ/ರೈಲ್ವೆ ನಿಲ್ದಾಣ *ಮಹದೇವಪುರದ ಐಟಿಟೆಕ್ ಪಾರ್ಕ್ * ಬೊಮ್ಮನಹಳ್ಳಿ ಗಾರ್ಮೆಂಟ್ಸ್ ಸಮುಚ್ಚಯ * ಲಾಲ್ ಬಾಗ್‌ಗಳಲ್ಲಿ ಸಮೂಹ ಗಾನ ನಡೆಯಲಿದೆ.

ಗಡಿನಾಡುಗಳಲ್ಲಿ * ಹೊರರಾಜ್ಯಗಳಲ್ಲಿ * ಹೊರದೇಶಗಳಲ್ಲಿ ಕನ್ನಡಿಗರು ಕನ್ನಡಾಭಿಮಾನಕ್ಕೆ ದನಿಯಾಗಲಿದ್ದಾರೆ.

ಮೈಸೂರು ಅರಮನೆ * ಚಿತ್ರದುರ್ಗದ ಕೋಟೆ * ಪಣಂಬೂರು ಬೀಚ್ * ಆಳ್ವಾಸ್ ಸಂಸ್ಥೆ ಮೂಡಬಿದ್ರೆ * ಶೃಂಗೇರಿ *ಬೇಲೂರು ಚನ್ನಕೇಶವ ದೇವಾಲಯ * ಹಂಪಿ ಕಲ್ಲಿನ ರಥ * ಶ್ರೀ ಸಿದ್ಧಗಂಗಾ ಮಠ * ಪಾವಗಡ ಸೌರಶಕ್ತಿ ಘಟಕ * ಗೋಲ್‌ಗುಂಬಜ್, ವಿಜಯಪುರ * ಸುವರ್ಣಸೌಧ ಮತ್ತು ಕೆ.ಎಲ್.ಇ. ಶಿಕ್ಷಣ ಸಂಸ್ಥೆ ಬೆಳಗಾವಿ * ಮಲ್ಪೆ ಬೀಚ್, ಉಡುಪಿ * ಐಹೊಳೆ, ಪಟ್ಟದಕಲ್ಲು * ಗುರುದ್ವಾರ, ಬೀದರ್ * ಶಾಖೋತ್ಪನ್ನ ವಿದ್ಯುತ್ ಘಟಕ, ರಾಯಚೂರು, * ಶಿವಪುರ ಧ್ವಜಸತ್ಯಾಗ್ರಹ ಭವನ, ಮಂಡ್ಯ * ಜೋಗ್ ಜಲಪಾತ * ಕಿಮ್ಸ್ ವೈದ್ಯಕೀಯ ಶಿಕ್ಷಣ ಸಂಸ್ಥೆ, ಹುಬ್ಬಳ್ಳಿಗಳು ಒಳಗೊಂಡಂತೆ ನಾಡಿನ ಐತಿಹಾಹಿಕ ಹಾಗೂ ಪಾರಂಪರಿಕ ತಾಣಗಳಲ್ಲಿ ಕನ್ನಡ ಹಾಡುಗಳು ಪ್ರತಿಧ್ವನಿಸಲಿವೆ.



**ಇದಕ್ಕೆ ಕಳಶವಿಟ್ಟಂತೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಐವತ್ತು ಸಾವಿರ ಜನರಿಂದ ಕನ್ನಡ ಗೀತೆಗಳ ಗಾಯನ**

ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಸಚಿವರುಗಳು, ಸರ್ಕಾರದ ಹಿರಿಯ ಅಧಿಕಾರಿಗಳು, ಚಲನಚಿತ್ರ ತಾರೆಯರು, ಹೆಸರಾಂತ ಗಾಯಕರು,ಸಾಂಸ್ಕೃತಿಕ ಲೋಕದ ದಿಗ್ಗಜರು ದನಿಗೂಡಿಸಲಿದ್ದಾರೆ.

## ನಾವೇನು ಮಾಡಬಹುದು?

ನಾಡಿನ ಪ್ರತಿ ಗ್ರಾಮದಲ್ಲಿ, ಕಾರ್ಖಾನೆಗಳಲ್ಲಿ, ವಸತಿ ಸಮುಚ್ಚಯಗಳಲ್ಲಿ ನೀವೇ ಸ್ವತಃ ಸಮೂಹ ಗಾಯನವನ್ನು ಆಯೋಜಿಸುವ ಮೂಲಕ ನಮ್ಮೊಡನೆ ಕೈಜೋಡಿಸಿ.

ನಿಮ್ಮ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಿ ನಿಮ್ಮ ಜಿಲ್ಲೆಯಲ್ಲಿ ನಡೆಯುವ ಕೋಟಿ ಕಂಠ ಗಾಯನದ ವಿವರ ಪಡೆದು ನಿಮ್ಮ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಿ.

ನೀವು ಆಯೋಜಿಸಿದ ಕೋಟಿ ಕಂಠ ಗಾಯನದ ಫೋಟೋ/ವಿಡಿಯೋ, ಸಂಖ್ಯೆ ಇತ್ಯಾದಿ ಉಪಯುಕ್ತ ಮಾಹಿತಿಗಳನ್ನು ಕಾರ್ಯಕ್ರಮ ಮುಗಿದ ತಕ್ಷಣವೇ ಆಯಾ ಜಿಲ್ಲಾ ಸಹಾಯಕ ನಿರ್ದೇಶಕರಿಗೆ ಸಲ್ಲಿಸಿ, ಇಲಾಖೆಯ ಜಾಲತಾಣಕ್ಕೆ ಅಪ್ಲೋಡ್ ಮಾಡುವುದು.

ಕೋಟಿ ಕಂಠ ಗಾಯನ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಪ್ರತಿಯೊಬ್ಬರಿಗೂ ಇಲಾಖೆ ವತಿಯಿಂದ ಅಭಿನಂದನಾ ಪತ್ರವನ್ನು ನೀಡಲಾಗುತ್ತದೆ.

ಈ ಕೋಟಿ ಕಂಠ ಗಾಯನದ ಯಶಸ್ಸಿಗೆ ನಿಮ್ಮ ವಿನೂತನ ಸಲಹೆ/ಯೋಚನೆಗಳು, ನೋಂದಣಿ ವಿವರಗಳು ಹಾಗೂ ಇತರ ತಾಂತ್ರಿಕ ಸಹಾಯಕ್ಕಾಗಿ ಈ ಕೆಳಕಾಣಿಸಿದ ಕೇಂದ್ರ ಕಚೇರಿಯ ಸಹಾಯವಾಣಿಗಳನ್ನು ಸಂಪರ್ಕಿಸಿ.

ಫೋನ್ : 9900534569, 9916832044,
9986837037, 9880442804

ಇಮೇಲ್ : kanbhavblr@gmail.com
kanajacoordinator@gmail.com

## ಕೋಟಿ ಕಂಠ ಗಾಯನದಲ್ಲಿ ಭಾಗವಹಿಸಲು ದಯವಿಟ್ಟು ಈ ಕೆಳಕಾಣಿಸಿದ ಕ್ಯೂಆರ್. ಕೋಡ್ ಅನ್ನು ಉಪಯೋಗಿಸಿ ನೊಂದಾಯಿಸಿಕೊಳ್ಳಿ

ನಾಡಿನಾದ್ಯಂತ ನಡೆಯುವ ಕೋಟಿ ಕಂಠ ಗಾಯನ ಅಭಿಯಾನದಲ್ಲಿ ಪಾಲ್ಗೊಳ್ಳಲು, ಸಹಭಾಗಿಗಳಾಗಲು ಮತ್ತು ನೀವೇ ಸ್ವತಃ ಸಮೂಹ ಗಾನ ಆಯೋಜಿಸಲು ಈ ಕೆಳಕಾಣಿಸಿದ ಅಧಿಕಾರಿಗಳನ್ನು ಸಂಪರ್ಕಿಸಿ:

| | |
|---|---|
| **ಶ್ರೀ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ**<br>ಜಂಟಿ ನಿರ್ದೇಶಕರು (ಮೈಸೂರು ವಲಯ) | 99166-00027<br>0821-2513225 |
| **ಶ್ರೀ ಅಶೋಕ್ ಎನ್. ಚಲವಾದಿ**<br>ಜಂಟಿ ನಿರ್ದೇಶಕರು (ಬೆಂಗಳೂರು ವಲಯ) | 99003-37738<br>080-22212582 |
| **ಶ್ರೀ ಕೆ.ಎಚ್. ಚೆನ್ನೂರ್**<br>ಜಂಟಿ ನಿರ್ದೇಶಕರು (ಕಲಬುರಗಿ ವಲಯ) | 94484-36877<br>08472-227734 |
| **ಶ್ರೀ ಬಸವರಾಜ ಹೂಗಾರ**<br>ಜಂಟಿ ನಿರ್ದೇಶಕರು (ಬೆಳಗಾವಿ ವಲಯ) | 94801-97511<br>0831-2474649 |



ನೆನಪಿಡಿ... ನಾಡಿನಾದ್ಯಂತ

# ಅಕ್ಟೋಬರ್ 28ರಂದು

ಬೆಳಗ್ಗೆ ಸರಿಯಾಗಿ

# 11 ಗಂಟೆಗೆ...

ಇತಿಹಾಸ ನಿರ್ಮಿಸೋಣ!

“

## ಬನ್ನಿ...

ಈ ಅಮೃತ ಘಳಿಗೆಯಲ್ಲಿ
ಭಾಗಿಯಾಗೋಣ....
ಈ ಅಪರೂಪದ ಕ್ಷಣಗಳನ್ನು
ನಮ್ಮದಾಗಿಸಿಕೊಳ್ಳೋಣ....
ಈ ಐತಿಹಾಸಿಕ ದಾಖಲೆಯ
ಭಾಗವಾಗೋಣ....